**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ನಿ(ಪ್ರಾ.ಶಿ)4/2019-20 ದಿನಾಂಕ: 17-07-2019

**ಜ್ಞಾಪನ**

**ವಿಷಯ: ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ವಿನಾಯಿತಿ / ಆದ್ಯತಾ ಪ್ರಕರಣಗಳಡಿ ಸ್ವೀಕೃತವಾಗಿರುವ ಅರ್ಜಿಗಳ ಹಾಗೂ ಆಕ್ಷೇಪಣೆಗಳನ್ನು ಪರಿಶೀಲನೆ ಹಾಗೂ ವಿಲೇವಾರಿ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನ.**

- - -

2018-19ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳು ಜಾರಿಯಲ್ಲಿರುತ್ತವೆ. ವರ್ಗಾವಣಾ ಮಾರ್ಗಸೂಚಿ ಹಾಗೂ ಇಲಾಖೆಯಿಂದ ಹೊರಡಿಸಿರುವ ಅಧಿಸೂಚನೆಗಳನುಸಾರ ರಾಜ್ಯದಾದ್ಯಂತ ಹಲವಾರು ಶಿಕ್ಷಕರು ವರ್ಗಾವಣೆ / ವಿನಾಯಿತಿ / ಆದ್ಯತಾ ಪ್ರಕರಣಗಳಡಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರದಿಂದ ಪ್ರಕಟವಾಗಿರುವ ತಾತ್ಕಾಲಿಕ / ವಿನಾಯಿತಿ / ಆದ್ಯತೆಗಳ ಪಟ್ಟಿಗಳ ಮೇಲೆ ಹಲವಾರು ಶಿಕ್ಷಕರಿಂದ ಆಕ್ಷೇಪಣೆಗಳು ಸಲ್ಲಿಕೆಯಾಗಿರುತ್ತವೆ. ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮುನ್ನ ಸದರಿ ಆಕ್ಷೇಪಣೆಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಬೇಕಾಗಿರುತ್ತದೆ. ಆದ್ದರಿಂದ ಸಕ್ಷಮ ಪ್ರಾಧಿಕಾರಿಗಳು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸಿ ನಿಗದಿಪಡಿಸಿದ ಕಾಲಮಿತಿಯಲ್ಲಿ ನಿಯಮಾನುಸಾರ ಇತ್ಯರ್ಥಪಡಿಸಲು ಸೂಚಿಸಲಾಗಿದೆ.

- ಆದ್ಯತಾ ಹಾಗೂ ವಿನಾಯಿತಿ ಪ್ರಕರಣಗಳಲ್ಲಿ ಸ್ವೀಕೃತವಾದ ಎಲ್ಲಾ ಮನವಿಗಳನ್ನು ವರ್ಗಾವಣಾ ತಂತ್ರಾಂಶದ ಮೂಲಕ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳ ಲಾಗ್-ಇನ್ ಗೆ ಈಗಾಗಲೇ ಕೇಂದ್ರ ಕಛೇರಿಯಿಂದ ರವಾನಿಸಲಾಗಿದೆ.
- ಸದರಿ ಮಾಹಿತಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಟಿಡಿಎಸ್ ತಂತ್ರಾಂಶದೊಂದಿಗೆ ತಾಳೆ ನೋಡುವ ಅವಶ್ಯಕತೆ ಇರುವುದಿಲ್ಲ.
- ಸಕ್ಷಮ ಪ್ರಾಧಿಕಾರಿಗಳು ತಮ್ಮ ಕಛೇರಿಯಲ್ಲಿ ಸ್ವೀಕೃತಗೊಂಡ ಎಲ್ಲಾ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ 17/07/2019ರೊಳಗೆ ರವಾನಿಸುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ಲಾಗ್-ಇನ್ ನಲ್ಲಿರುವ ಎಲ್ಲಾ ವಿನಾಯಿತಿ / ಆದ್ಯತಾ ಮನವಿಗಳು ಹಾಗೂ ಆಕ್ಷೇಪಣೆಗಳನ್ನು ಈ ಕೆಳಕಂಡ ಆಧಾರದ ಮೇಲೆ ಅಂಗೀಕಾರ / ತಿರಸ್ಕೃತ ಪ್ರಕರಣಗಳೆಂದು ವರ್ಗೀಕರಿಸುವುದು.

**ವಿನಾಯಿತಿ ಪ್ರಕರಣಗಳಡಿ ಸ್ವೀಕೃತವಾದ ಮನವಿಗಳನ್ನು ಅಂಗೀಕರಿಸಲು ಪರಿಗಣಿಸಬೇಕಾದ ಪ್ರಮಾಣಪತ್ರಗಳು:**

| ಕ್ರ.ಸ | ಕೋರಿರುವ ವಿನಾಯಿತಿ | ಸಲ್ಲಿಸಬೇಕಾದ ಪ್ರಮಾಣ ಪತ್ರ |
|---|---|---|
| 1 | ಮಾನ್ಯತೆ ಪಡೆದ ಶಿಕ್ಷಕರ ಸಂಘ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಗಳು. | ಸಂಘದ ಅಧ್ಯಕ್ಷರ ದೃಢೀಕರಣ. (ತಾಲ್ಲೂಕು ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ತಾಲ್ಲೂಕು ಅಧ್ಯಕ್ಷರು / ಜಿಲ್ಲಾ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ಜಿಲ್ಲಾ ಅಧ್ಯಕ್ಷರು / |

| | | |
|---|---|---|
| | | ರಾಜ್ಯ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ರಾಜ್ಯ ಅಧ್ಯಕ್ಷರ ದೃಢೀಕರಣ ) |
| 2 | ಅವಿವಾಹಿತ ಮಹಿಳಾ ಶಿಕ್ಷಕರು, | ಸೇವಾ ವಹಿ ದೃಢೀಕರಣ ಪತ್ರ (ಸಂಬಂಧಿಸಿದ ಡಿಡಿಓ ರವರು ವಿತರಿಸಿರತಕ್ಕದ್ದು) ಅಥವಾ ಸಂಬಂಧಿಸಿದ ತಹಸೀಲ್ದಾರರಿಂದ ಪಡೆದ ದೃಢೀಕರಣ ಪತ್ರ . |
| 3 | ವಿಧವಾ ಮಹಿಳಾ ಶಿಕ್ಷಕರು, | ಪತಿಯ ಮರಣ ಪ್ರಮಾಣ ಪತ್ರ ಅಥವಾ ಸಂಬಂಧಿಸಿದ ತಹಸೀಲ್ದಾರರಿಂದ ಪಡೆದ ವಿಧವಾ ಪ್ರಮಾಣ ಪತ್ರ |
| 4 | ದೈಹಿಕ ಅಂಗವಿಕಲ ಶಿಕ್ಷಕರ ಪ್ರಕರಣಗಳು. | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ (ಶೇಕಡ 40ಕ್ಕಿಂತಲೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು) |
| 5 | ಪತಿ ಮತ್ತು ಪತ್ನಿ ಪ್ರಕರಣಗಳು ( ಪತಿ ಅಥವಾ ಪತ್ನಿಸರ್ಕಾರಿ / ಅನುದಾನಿತ ಶಿಕ್ಷಣ ಸಂಸ್ಥೆ / ಸಾರ್ವಜನಿಕ ವಲಯದ ಉದ್ದಿಮೆ / ರಾಷ್ಟ್ರೀಕೃತ ಬ್ಯಾಂಕ್ ಗಳು / ಸರ್ಕಾರಿ ಪ್ರಾಯೋಜಕತ್ವದ ಸೊಸೈಟಿಯ ಖಾಯಂ ನೌಕರರಾಗಿದ್ದಲ್ಲಿ) | ನೇಮಕಾತಿ ಪ್ರಾಧಿಕಾರದಿಂದ ಖಾಯಂ ನೌಕರರು ಎಂಬ ಬಗ್ಗೆ ಪಡೆದ ಪ್ರಮಾಣ ಪತ್ರ. ಸರ್ಕಾರಿ ನೌಕರರು ಎಂಬುದಕ್ಕೆ ಕೆ.ಜಿ.ಐ.ಡಿ ಸಂಖ್ಯೆ ಅಥವಾ ಹೆಚ್.ಆರ್.ಎಂ.ಎಸ್ ಹಾಗು ಸೇವಾ ದೃಢೀಕರಣ ಪ್ರತಿಯನ್ನು ಸಲ್ಲಿಸತಕ್ಕದ್ದು.<br><br>(ಡಿಸಿಸಿ ಬ್ಯಾಂಕ್‌ಗಳು ಹಾಗೂ ವಿಎಸ್‌ಎಸ್‌ಎನ್ ಮುಂತಾದ ಸೊಸೈಟಿಗಳು ಸರ್ಕಾರದಿಂದ ಸ್ಥಾಪಿತವಾದ ಸೊಸೈಟಿ ಎಂಬುದಾಗಿ ಪರಿಗಣಿಸಲು ಬರುವುದಿಲ್ಲ ಎಂಬ ಬಗ್ಗೆ ಸಹಕಾರ ಇಲಾಖೆಯಿಂದ ಅಭಿಪ್ರಾಯ ದೊರೆತಿರುತ್ತದೆ) |
| 6 | ಗಂಭೀರ ಕಾಯಿಲೆಯ ಶಿಕ್ಷಕರು / ಅವಲಂಬಿತರ ಪ್ರಕರಣಗಳು. | ಅದೇ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಹೃದಯ ಸಂಬಂಧಿ ಅಥವಾ ಕಿಡ್ನಿ ಅಥವಾ ಕ್ಯಾನ್ಸರ್ ಅಥವಾ ಹೆಚ್.ಐ.ವಿ ಮಾರಣಾಂತಿಕ ಕಾಯಿಲೆ (Terminally Ill) ಪ್ರಕರಣ ಎಂಬ ಬಗ್ಗೆ ಪಡೆದ ವೈದ್ಯಕೀಯ ಪ್ರಮಾಣ ಪತ್ರ |
| 7 | ನಿವೃತ್ತಿಗೆ ಎರಡು ವರ್ಷಕ್ಕಿಂತ ಸೇವಾವಧಿ ಕಡಿಮೆ ಇರುವ ಶಿಕ್ಷಕರು | ಸೇವಾ ವಹಿ ದೃಢೀಕರಣ ಪತ್ರ |

**ಆದ್ಯತಾ ಪ್ರಕರಣಗಳಡಿ ಸ್ವೀಕೃತವಾದ ಮನವಿಗಳನ್ನು ಅಂಗೀಕರಿಸಲು ಪರಿಗಣಿಸಬೇಕಾದ ಪ್ರಮಾಣಪತ್ರಗಳು :**

| ಕ್ರ.ಸ | ಕೋರಿರುವ ವಿನಾಯಿತಿ | ಸಲ್ಲಿಸಬೇಕಾದ ಪ್ರಮಾಣ ಪತ್ರ |
|---|---|---|
| 1 | ಗಂಭೀರ ಕಾಯಿಲೆಯ ಶಿಕ್ಷಕರ ಪ್ರಕರಣಗಳು. (ಶಿಕ್ಷಕರು / ಶಿಕ್ಷಕರ ಪತಿ – ಪತ್ನಿ / ಮಕ್ಕಳು) | ಅದೇ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಹೃದಯ ಸಂಬಂಧಿ ಅಥವಾ ಕಿಡ್ನಿ ಅಥವಾ ಕ್ಯಾನ್ಸರ್ ಅಥವಾ ಹೆಚ್.ಐ.ವಿ ಮಾರಣಾಂತಿಕ ಕಾಯಿಲೆ (Terminally Ill) ಪ್ರಕರಣ ಎಂಬ ಬಗ್ಗೆ ಪಡೆದ ವೈದ್ಯಕೀಯ ಪ್ರಮಾಣ ಪತ್ರ |
| 2 | ಶಿಕ್ಷಕರು ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ / ಅಂಗಾಗ ಕಸಿ ಮರು ಜೋಡಣೆಯಾದ ಪ್ರಕರಣಗಳು. | ಅದೇ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ |
| 3 | ದೈಹಿಕ ಅಂಗವಿಕಲ ಶಿಕ್ಷಕರ ಪ್ರಕರಣಗಳು. | ಅದೇ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ (ಶೇಕಡ 40ಕ್ಕಿಂತಲೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು) |
| 4 | ವಿಧವೆ ಅಥವಾ ಅವಲಂಬಿತ ಮಕ್ಕಳಿರುವ ವಿಚ್ಛೇಧಿತ | ✓ ಪತಿಯ ಮರಣ ಪ್ರಮಾಣ ಪತ್ರ, |

| | | |
|---|---|---|
| | ಮಹಿಳಾ ಶಿಕ್ಷಕಿಯರ ಪ್ರಕರಣಗಳು. | ವಿಚ್ಛೇದನೆಯಾಗಿರುವ ಬಗ್ಗೆ ನ್ಯಾಯಾಲಯ ನೀಡಿರುವ ಡಿಕ್ರಿ ಪ್ರತಿ ಮತ್ತು ಮರು ಮದುವೆಯಾಗಿಲ್ಲದಿರುವ ಬಗ್ಗೆ ಹಾಗು ಅವಲಂಬಿತ ಮಕ್ಕಳಿರುವ ಬಗ್ಗೆ ಇತ್ತೀಚಿನ ದಿನಾಂಕದಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಿಂದ ಪಡೆದ ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು. |
| 5 | ಸೈನಿಕರ ಪ್ರಕರಣಗಳು. (ನಿವೃತ್ತಿ/ಹುತಾತ್ಮ/ಶಾಶ್ವತ ಅಂಗವಿಕಲ/ಮರಣ ) | ಸೈನಿಕರ ಕ್ಷೇಮಾಭಿವೃದ್ಧಿ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ. |
| 6 | ಸೈನಿಕರ ಪ್ರಕರಣಗಳು. (ಪ್ರಸ್ತುತ ಸೇವೆ ಯಲ್ಲಿರುವವರು ) | ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ. |
| 7 | ಪತಿ ಮತ್ತು ಪತ್ನಿ ಪ್ರಕರಣಗಳು ( ಪತಿ ಅಥವಾ ಪತ್ನಿಸರ್ಕಾರಿ / ಸಾರ್ವಜನಿಕ ವಲಯದ ಉದ್ದಿಮೆ / ರಾಷ್ಟ್ರೀಕೃತ ಬ್ಯಾಂಕ್ ಗಳು / ಸರ್ಕಾರಿ ಪ್ರಾಯೋಜಕತ್ವದ ಸೊಸೈಟಿಯ ಖಾಯಂ ನೌಕರರಾಗಿದ್ದಲ್ಲಿ) | ನೇಮಕಾತಿ ಪ್ರಾಧಿಕಾರದಿಂದ ಖಾಯಂ ನೌಕರರು ಎಂಬ ಬಗ್ಗೆ ಪಡೆದ ಪ್ರಮಾಣ ಪತ್ರ .<br><br>(ಡಿಸಿಸಿ ಬ್ಯಾಂಕ್‌ಗಳು ಹಾಗೂ ವಿಎಸ್‌ಎಸ್‌ಎನ್ ಮುಂತಾದ ಸೊಸೈಟಿಗಳು ಸರ್ಕಾರದಿಂದ ಸ್ಥಾಪಿತವಾದ ಸೊಸೈಟಿ ಎಂಬುದಾಗಿ ಪರಿಗಣಿಸಲು ಬರುವುದಿಲ್ಲ ಎಂಬ ಬಗ್ಗೆ ಸಹಕಾರ ಇಲಾಖೆಯಿಂದ ಅಭಿಪ್ರಾಯ ದೊರೆತಿರುತ್ತದೆ) |
| 8 | ಪತಿ – ಪತ್ನಿ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಕರಣಗಳು. | ನೇಮಕಾತಿ ಪ್ರಾಧಿಕಾರದಿಂದ ಖಾಯಂ ನೌಕರರು ಎಂಬ ಬಗ್ಗೆ ಪಡೆದ ಪ್ರಮಾಣ ಪತ್ರ |
| 9 | ಗರ್ಭಿಣಿ/1 ವರ್ಷದೊಳಗಿನ ಮಗುವನ್ನು ಹೊಂದಿರುವ ಶಿಕ್ಷಕಿಯರ ಪ್ರಕರಣಗಳು. | ಇತ್ತೀಚಿನ ದಿನಾಂಕದಲ್ಲಿ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ ಮತ್ತು ಮಗುವಿನ ಜನ್ಮ ದೃಢೀಕರಣ ಪತ್ರವನ್ನು ಮತ್ತು ಸಂಬಂಧಿತ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಶಿಕ್ಷಕಿಯು ಪ್ರಸೂತಿ ರಜೆಯನ್ನು ಪಡೆದು ಸೇವಾ ವಹಿಯಲ್ಲಿ ದೃಢೀಕರಿಸಿರುವ ಬಗ್ಗೆ ಸೇವಾವಹಿಯ ಉದ್ಧೃತ ಭಾಗದ ಪ್ರತಿಯನ್ನು ಸಲ್ಲಿಸತಕ್ಕದ್ದು |
| 11 | ಸಂಘದ ಚುನಾಯಿತ ಪದಾಧಿಕಾರಿ | ಪ್ರಸ್ತುತ ಅವಧಿಗೆ ಚುನಾಯಿತ ಪದಾಧಿಕಾರಿಯಾಗಿರುವ ಬಗ್ಗೆ ಸಂಘದ ಅಧ್ಯಕ್ಷರ ದೃಢೀಕರಣ. (ತಾಲ್ಲೂಕು ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ತಾಲ್ಲೂಕು ಅಧ್ಯಕ್ಷರು / ಜಿಲ್ಲಾ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ಜಿಲ್ಲಾ ಅಧ್ಯಕ್ಷರು / ರಾಜ್ಯ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ರಾಜ್ಯ ಅಧ್ಯಕ್ಷರ ದೃಢೀಕರಣ ) |

- ಕ್ಷೇತ್ರಶಿಕ್ಷಣಾಧಿಕಾರಿಗಳು ಮೇಲಿನ ದಾಖಲಾತಿಗಳ ಪರಿಶೀಲನೆಯ ಆಧಾರದ ಮೇಲೆ ವರ್ಗಾವಣೆ ಕೋರಿರುವ ಶಿಕ್ಷಕರ 'ಕರಡು ಅಂಗೀಕೃತ' ಮತ್ತು 'ಕರಡು ತಿರಸ್ಕೃತ' ಪಟ್ಟಿಗಳನ್ನು ದಿನಾಂಕ 19/07/2019ರೊಳಗೆ ತಯಾರಿಸುವುದು. ಸದರಿ ಪಟ್ಟಿಯ ಕೆಳಭಾಗದಲ್ಲಿ **"ಇದು ಆದ್ಯತೆ ಕುರಿತಾದ ಜ್ಯೇಷ್ಠತಾ ಪಟ್ಟಿಯಾಗಿರುವುದಿಲ್ಲ"** ಎಂಬುದನ್ನು ಸ್ಪಷ್ಟವಾಗಿ ನಮೂದಿಸುವುದು. ಕರಡು ತಿರಸ್ಕೃತ ಪಟ್ಟಿಯಲ್ಲಿ ಪ್ರತಿಯೊಂದು ಪ್ರಕರಣಕ್ಕೆ ತಿರಸ್ಕೃತವೆಂದು ಪರಿಗಣಿಸಲು ಸಕಾರಣಗಳನ್ನು ತಪ್ಪದೆ ನಮೂದಿಸುವುದು.

ಸದರಿ ಕರಡು ಪಟ್ಟಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಸಕ್ಷಮ ಪ್ರಾಧಿಕಾರದ ಕಛೇರಿಗಳ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಪ್ರಚುರಪಡಿಸುವುದು ಹಾಗೂ ಸದರಿ ಪ್ರಕಟಣೆಯ ಬಗ್ಗೆ ಸ್ಥಳೀಯ ಪತ್ರಿಕೆಗಳಿಗೆ ಹಾಗೂ ಶಿಕ್ಷಕರ ಸಂಘಕ್ಕೆ ಮಾಹಿತಿ ನೀಡುವುದು.

- ❖ ಸದರಿ ಪ್ರಕಟಣೆಯಲ್ಲಿ ಪ್ರಚುರಪಡಿಸಲಾದ ಕರಡು ಪಟ್ಟಿಗೆ ಅಂತಿಮವಾಗಿ ಆಕ್ಷೇಪಣೆ / ಅಗತ್ಯ ದಾಖಲೆಗಳನ್ನು ಖುದ್ದಾಗಿ ಸಂಬಂಧಪಟ್ಟ ಅರ್ಜಿದಾರರು ಸಲ್ಲಿಸಲು ದಿನಾಂಕ 23/07/2019 ಅನ್ನು ನಿಗದಿಪಡಿಸುವುದು. ಸದರಿ ದಿನದಂದು ಕ್ಷೇತ್ರಶಿಕ್ಷಣಾಧಿಕಾರಿಗಳು ಕಛೇರಿಯಲ್ಲಿಯೇ ಹಾಜರಿದ್ದು ಎಲ್ಲಾ ಅರ್ಜಿದಾರರ ಮನವಿಗಳನ್ನು ಆಲಿಸಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದು ಹಾಗೂ ಅಂತಿಮ ಪಟ್ಟಿಯನ್ನು ದಿನಾಂಕ 24/07/2019ರಂದು ಪ್ರಚುರಪಡಿಸುವುದು.
- ❖ ಅಂತಿಮ ಪಟ್ಟಿಯನ್ನು ಹೊರಡಿಸಿದ ನಂತರ ಯಾವುದೇ ಆಕ್ಷೇಪಣೆಗಳನ್ನು ಅಥವಾ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ. ಯಾವುದೇ ಅರ್ಜಿದಾರರು ಸೂಕ್ತ ದಾಖಲಾತಿಗಳನ್ನು ಸಲ್ಲಿಸದೇ ನಕಲಿ ದಾಖಲಾತಿಗಳ ಆಧಾರದ ಮೇಲೆ ವರ್ಗಾವಣೆ ಅರ್ಜಿ ಅಂಗೀಕೃತಗೊಂಡಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ, ಸದರಿಯವರ ಕಛೇರಿಯ ಮ್ಯಾನೇಜರ್ ಜೊತೆಗೆ ಸಂಬಂಧಿತ ಕಾರ್ಯನಿರ್ವಾಹಕರು ಮತ್ತು ಸಂಬಂಧಿಸಿದ ಶಿಕ್ಷಕ ಮನವಿದಾರರೆಲ್ಲರನ್ನೂ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.
- ❖ ಕ್ಷೇತ್ರಶಿಕ್ಷಣಾಧಿಕಾರಿಗಳು ಅಂತಿಮ ಪಟ್ಟಿಯ ಆಧಾರದ ಮೇಲೆ ಅದೇ ದಿನಾಂಕದಂದು ವರ್ಗಾವಣೆ ತಂತ್ರಾಂಶದಲ್ಲಿ ಎಲ್ಲಾ ಮನವಿಗಳನ್ನು ಅಂಗೀಕೃತ / ತಿರಸ್ಕೃತ ಎಂಬುದಾಗಿ ನಮೂದಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು.
- ❖ ಸಕ್ಷಮ ಪ್ರಾಧಿಕಾರಿಗಳು ಸದರಿ ಪಟ್ಟಿಯ ಆಧಾರದ ಮೇಲೆ ವರ್ಗಾವಣಾ ಮಾರ್ಗಸೂಚಿಗಳನುಸಾರ ವರ್ಗಾವಣಾ ಪ್ರಕ್ರಿಯೆಯನ್ನು ಹಮ್ಮಿಕೊಳ್ಳತಕ್ಕದ್ದು .

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಗೆ,**

**ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ**
**ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರವಾಗಿ)**

**ಪ್ರತಿ :**

1) ಅಪರ ಆಯುಕ್ತರು , ಧಾರವಾಡ / ಗುಲ್ಬರ್ಗಾ , ಮಾಹಿತಿಗಾಗಿ
2) ಸಹನಿರ್ದೇಶಕರು, ಬೆಂಗಳೂರು / ಮೈಸೂರು ವಿಭಾಗ, ಮಾಹಿತಿ ಕ್ರಮಕ್ಕಾಗಿ
3) ಹಿರಿಯ ಸಹಾಯಕ ನಿರ್ದೇಶಕರು , ಇ – ಆಡಳಿತ ವಿಭಾಗ , ಆಯುಕ್ತರ ಕಛೇರಿ, ಬೆಂಗಳೂರು – ಕ್ರಮಕ್ಕಾಗಿ